<u>ಇಂದು ದಿಃ **23-08-2022** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**1 ರಿಂದ 7 ನೇ ಪ್ರತಿವಾದಿಯರ ಪರವಾಗಿ ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಹೆಚ್ ವಕೀಲರಿಂದಃ**

ಸಾಕ್ಷಿಗೆ ನಿ.ಡಿ-6 ರ ಮೇಲಿರುವ ಸಹಿಗಳನ್ನು ಸಾಕ್ಷಿಗೆ ತೋರಿಸಲಾಗಿ ನೋಡಿ ಗುರುತಿಸಿದ್ದಾರೆ. ಸದರಿ ದಾಖಲೆಗೆ ಸಾಕ್ಷಿಯು ಪಕ್ಷಗಾರರಾಗಿರುವುದಿಲ್ಲ ಮತ್ತು ಸಾಕ್ಷಿದಾರರಾಗಿರುವುದಿಲ್ಲ. ಆದ್ದರಿಂದ ನಿ.ಡಿ-6 ರ ಮೇಲಿರುವ ಸಹಿಗಳನ್ನು ಗುರುತಿಸಲು ಬರುವುದಿಲ್ಲ ಎಂದು, ತಕರಾರು ಮಾಡಿದ್ದರಿಂದ ಸದರಿ ಸಂಗತಿಗಳನ್ನು ವಾದ ಮಂಡನೆಯಲ್ಲಿ ಚರ್ಚಿಸಲು ಅವಕಾಶ ಇಲ್ಲದೇ ಇರುವುದರಿಂದ, ವಾದಿಯ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರವಾಗಿ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ಕೆಂಚಪ್ಪ ಎನ್ನುವವರು 10 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದಾರೆ. ಮುರಿಗೆಪ್ಪನ ಕುಟುಂಬದವರು ಅಲ್ಪ ಸ್ವಲ್ಪ ಪರಿಚಯಸ್ತರಾಗಿದ್ದಾರೆ. ಮುರಿಗೆಪ್ಪ ಮತ್ತು ಆತನ ಕುಟುಂಬದವರು ನಾನು ಸ್ವಾಮಿ ಆಗಿರುವುದರಿಂದ ನನ್ನ ಮೇಲೆ ಗೌರವ ಇಟ್ಟುಕೊಂಡಿದ್ದಾರೆ. ಮುರಿಗೆಪ್ಪನ ಕುಟುಂಬದವರ ಮಧ್ಯದಲ್ಲಿ ವ್ಯಾಜ್ಯಗಳು ಬಂದಾಗ ನನ್ನ ಹತ್ತಿರ ಬಂದರೆ ನಾನೇ ವ್ಯಾಜ್ಯ ಬಗೆಹರಿಸುತ್ತಿದ್ದೆನು. ಈ ದಾವೆ ಸಲ್ಲಿಸುವುದಕ್ಕಿಂತ ಮೊದಲು ನಾನು ವಾದಿ ಮತ್ತು ಪ್ರತಿವಾದಿಯರ ಮಧ್ಯದಲ್ಲಿ ರಾಜೀ ಪಂಚಾಯಿತಿ ಮಾಡಿದ್ದೇನೆ ಆದರೆ ರಾಜೀ ಆಗಿರುವುದಿಲ್ಲ. ನಾನು ಮತ್ತು ಕೆಂಚಪ್ಪ ನಾಟಕದಲ್ಲಿ ಅಭಿನಯ ಮಾಡುತ್ತಿದ್ದೆವು. ನಾನು ಮತ್ತು ಕೆಂಚಪ್ಪ ಒಟ್ಟಿಗೆ ಬ್ಯಾಂಕ್‌ನಲ್ಲಿ ಸಾಲ ಪಡೆದು, ಮೋಟರ್ ಸೈಕಲ್ ಗಳನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿ. ಅದೇ ರೀತಿ ನಾನು ಮತ್ತು 1 ನೇ ಪ್ರತಿವಾದಿ ಸೇರಿ ಒಟ್ಟಿಗೆ ಜಮೀನು ಖರೀದಿ ಮಾಡಿದ್ದೇವೆ ಎಂದರೆ ಸರಿ. ಟ್ರಾಕ್ಟರ್ ನ್ನು ಒಟ್ಟಿಗೆ ಖರೀದಿ ಮಾಡಿದ್ದೇವೆಂದರೆ ಟ್ರಾಟ್ಕರ್ ನ್ನು ನಾನು ಮೊದಲು ಖರೀದಿ ಮಾಡಿದ್ದೇನೆಂದು ಉತ್ತರಿಸುತ್ತಾರೆ. ನನ್ನ ಮತ್ತು 1 ನೇ ಪ್ರತಿವಾದಿಯ ಹಳೆಯ ಮನೆ ಒಂದೇ ಓಣಿಯಲ್ಲಿದ್ದವು. ಪೂಜಾರ್ ಓಣಿ ಎಂದು ಕರೆಯುತ್ತಾರೆ. ನಮ್ಮ ಮನೆ ಬಾಗಿಲು ಪೂರ್ವ ದಿಕ್ಕಿಗೆ ಇತ್ತು, 1 ನೇ ಪ್ರತಿವಾದಿಯ ಮನೆಯ ಬಾಗಿಲು ಪಶ್ಚಿಮ ದಿಕ್ಕಿಗೆ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿ ಮತ್ತು 6 ನೇ ಪ್ರತಿವಾದಿಗೆ ಮನಸ್ಥಾಪ ಬಂದಾಗ ಅದೇ ಮನೆಗೆ ಹೋಗಿ ಪಂಚಾಯಿತಿ ಮಾಡಿದ್ದೇನೆಂದರೆ ಸಾಕ್ಷಿಯು ಅವರು ಕರೆದಾಗ ಹೋಗಿದ್ದೇನೆಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಯ ಮನೆ ಬಿದ್ದು ಹಾಳಾಗಿದ್ದರಿಂದ ಜನತಾ ಪ್ಲಾಟ್ ಗೆ ಹೋಗಿದ್ದಾರೆಂದರೆ ಸರಿಯಲ್ಲ. ಕೋಡಿಹಳ್ಳಿ ಜಮೀನನ್ನು ಖರೀದಿಸುವಾಗ ನಾನೇ ಮುಖ್ಯ ಪಾತ್ರ ವಹಿಸಿದ್ದೇನೆಂದರೆ ಸರಿ. ಸದರಿ

ಜಮೀನಿನ ಅಗ್ರಿಮೆಂಟ್ ಸಮಯಕ್ಕೆ ನಾನೇ ಹಣ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ, ತಲಾ 10 ಸಾವಿರ ಹಣ ಕೊಟ್ಟಿದ್ದೇವೆ. 1 ನೇ ಪ್ರತಿವಾದಿಯು ಕುಂದವಾಡ್ ಶುಗರ್ ಪ್ಯಾಕ್ಟರಿಗೆ ಕಬ್ಬು ಮಾರಿದ ಹಣವನ್ನು ಕ್ರಯ ಪತ್ರ ಮಾಡುವಾಗ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನಾನು ಖರೀದಿಸಿದ 4 ಎಕರೆ ಜಮೀನನ್ನು ನನ್ನ ಹೆಂಡತಿಯ ಹೆಸರಿಗೆ ಕ್ರಯ ಪತ್ರ ಬರೆಯಿಸಿದ್ದೇನೆ. 1 ನೇ ಪ್ರತಿವಾದಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಿದ್ದರಿಂದ ಆತನ ಹೆಂಡತಿಯ ಹೆಸರಿಗೆ ಕ್ರಯ ಪತ್ರ ಬರೆಯಿಸಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಕ್ರಯ ಪತ್ರದಲ್ಲಿಯಾಗಲೀ ಅಥವಾ ನನ್ನ ಕ್ರಯ ಪತ್ರದಲ್ಲಿಯಾಗಲೀ 1 ನೇ ಪ್ರತಿವಾದಿಯ ಮಾವ ನಾಗರಕಟ್ಟಿ ಮಹದೇವಪ್ಪನ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಕ್ರಯ ಪತ್ರದಲ್ಲಿ ಇರುವುದಿಲ್ಲ. 1 ನೇ ಪ್ರತಿವಾದಿಯ ಕ್ರಯ ಪತ್ರದಲ್ಲಿ ಸಹಿ ಮಾಡಿದ್ದಾರೋ ಅಥವಾ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಾವ ಕ್ರಯ ಪತ್ರ ಆಗುವಾಗ ಹಾಜರಿದ್ದು, ರೂ.20 ಸಾವಿರಗಳನ್ನು ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಸಂಬಂಧಿಕರಾದ ಬಿ.ಜಿ ಕೊಟ್ರಪ್ಪ ಎನ್ನುವವರು ಎಂ.ಎಲ್.ಎ ಆಗಿದ್ದರು ಎಂದರೆ ಸರಿ, ಆದರೆ ಅವರ ಸಂಬಂಧಿಕರು ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಜನತಾ ಪ್ಲಾಟ್ ಮಂಜೂರಾಗುವಾಗ ಬಿ.ಜಿ ಕೊಟ್ರಪ್ಪನವರು ಸಹಕಾರ ಮಾಡಿರಬಹುದು. 1 ನೇ ಪ್ರತಿವಾದಿಯ ಮನೆ ಇರುವ ಜಾಗದಲ್ಲಿ ಮೊದಲು ಮುರಿಗೆಪ್ಪ ಮತ್ತು ಅವರ ಸಹೋದರರ ಕೊಟ್ಟಿಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಮುರಿಗೆಪ್ಪ ಮತ್ತು ಆತನ ಸಹೋದರ ಪಂಚಪ್ಪ ಎನ್ನುವವರು ಸ್ವಲ್ಪ ದಿನ ಜನತಾ ಪ್ಲಾಟ್ ಇರುವ ಜಾಗದಲ್ಲಿ ವಾಸವಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಜನತಾ ಪ್ಲಾಟ್ ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಕೊಟ್ಟಿದ್ದರೂ 1 ನೇ ಪ್ರತಿವಾದಿಗೆ ಮಾತ್ರ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಕೊಟ್ಟ ಹಕ್ಕು ಪತ್ರದಲ್ಲಿ ನಮೂದಾದ ಮೇರೆಗೆ ನಾನು ಆತನಿಗೆ ಮಂಜೂರಾಗಿದೆ ಎಂದು ಹೇಳುತ್ತಿದ್ದೇನೆ. ಕೆಂಚಪ್ಪ 1982-83 ನೇ ವರ್ಷದಲ್ಲಿಯೇ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಯಿಸಿರುವುದು ಸುಳ್ಳು ಇರುತ್ತದೆ. 1 ನೇ ಪ್ರತಿವಾದಿ, 1986 ಕ್ಕಿಂತ ಮೊದಲು ಎಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಕೂಲಿ ಮಾಡುತ್ತಿದ್ದನ್ನು ನೋಡಿದ್ದೀಯ ಎಂದರೆ ಸಾಕ್ಷಿ ನಾನು ನೋಡಿದ್ದೇನೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೋಡಿಹಳ್ಳಿ ಜಮೀನನ್ನು ಒಟ್ಟು ಕುಟುಂಬದ ಆಧಾಯದಿಂದ ಖರೀದಿಸಿದ್ದರು. 1 ನೇ ಪ್ರತಿವಾದಿ ಸ್ವಂತ ದುಡಿಮೆಯಿಂದ ಖರೀದಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ಅವರ ಮಾವ 20 ಸಾವಿರ ಕೊಟ್ಟಿದ್ದಾರೆ ಉಳಿದ ಹಣವನ್ನು 1 ನೇ ಪ್ರತಿವಾದಿ ಕೂಡಿಸಿಕೊಂಡು ಖರೀದಿ ಮಾಡಿದ್ದಾರೆಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿ ಆತನ ಮಕ್ಕಳ ಹೆಸರಿಗೆ ಖಾತಾ ವರ್ಗಾವಣೆ ಮಾಡಿದ

ಬಗ್ಗೆ ಹೇಳಿಲ್ಲ. 1 ನೇ ಪ್ರತಿವಾದಿ ಆ ವಿಷಯನ್ನು ನನಗೆ ಹೇಳಿರುವುದಿಲ್ಲ. 1 ನೇ ಪ್ರತಿವಾದಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸುಳ್ಳು ಇರುತ್ತವೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.